**Pratham Mysore**
*Every Child in School and Learning Well*

# ಪ್ರಜ್ಞಾನ ಪತ್ರಿಕೆ

**19-11-2022** | *ಪ್ರಥಮ್ ಮೈಸೂರ್ ಪ್ರೇರಿತ* | *ಸಂಚಿಕೆ- 10*

## ಪಕ್ಷಿ ವೀಕ್ಷಣೆ - ಉತ್ತಮ ಹವ್ಯಾಸ





### ನನ್ನ ಪಕ್ಷಿ – ಪುಸ್ತಕ

ನಿಮ್ಮ ಪಕ್ಷಿ ವೀಕ್ಷಣಾ ಪುಸ್ತಕವನ್ನು ಸ್ವಂತ ಬರವಣಿಗೆಯಲ್ಲಿ ಬರೆದುಕೊಳ್ಳಿ. ಮನೆ ಹತ್ತಿರ ಕಾಣಸಿಗುವ ಕಾಗೆ,ಗುಬ್ಬಿ,ಮೈನ ಈ ರೀತಿಯ ಪಕ್ಷಿಗಳ ಬಗ್ಗೆ ಸರ್ವೇಕ್ಷಣೆ ಮಾಡುವುದು ಬೇಡ. ಅಪರೂಪದ ಪಕ್ಷಿಗಳ ಬಗ್ಗೆ ಮಾಹಿತಿ ಸಂಗ್ರಹಿಸಿ. ಪಕ್ಷಿಗಳನ್ನು ಗಮನವಿಟ್ಟು ವೀಕ್ಷಿಸಿ, ಕೊಟ್ಟಿರುವ ಪ್ರಶ್ನೆಗಳಿಗೆ ನಿಮ್ಮ ಪುಸ್ತಕದಲ್ಲಿ ಮಾಹಿತಿಗಳನ್ನು ಬರೆದುಕೊಳ್ಳಿ. ಹತ್ತು ಪಕ್ಷಿಗಳಿಗಿಂತ ಕಡಿಮೆ ಇಲ್ಲದಂತೆ ಮಾಹಿತಿ ಸಂಗ್ರಹಿಸಿ. ಇಷ್ಟವಿದ್ದಲ್ಲಿ ಇನ್ನೂ ಹೆಚ್ಚಿನ ಪಕ್ಷಿಗಳ ವೀಕ್ಷಣೆ ಮಾಡಿ, ಮಾಹಿತಿ ಬರೆಯಿರಿ. ಆ **ಪಕ್ಷಿಯ ಚಿತ್ರವನ್ನೂ ಬಿಡಿಸಿರಿ. ನಿಮ್ಮ ಪಕ್ಷಿ ವೀಕ್ಷಣಾ ಆಲ್ಬಮ್ ಗೆ ಆಕರ್ಷಕ ಹೆಸರನ್ನು ಕೊಡಿ.**



**1. ಪಕ್ಷಿಯ ಆಕಾರ/ಗಾತ್ರ** (ಸಾಕುವ ಪಕ್ಷಿಗೆ ಹೋಲಿಕೆ)
....... ....... ....... ....... ....... ....... ....... ....... ....... .......

**2. ಪಕ್ಷಿಯ ಬಣ್ಣ** ರೆಕ್ಕೆ : ....... .... ಕೊಕ್ಕು : ....... .......
ಕತ್ತು : ....... ....... ಎದೆ : ....... ....... ಕಾಲು /ಪಾದ : ....... .......

**3.ಯಾವಾಗ ಕಾಣಸಿಗುತ್ತದೆ ?** (ವರ್ಷ ಪೂರ್ತಿ/ ಯಾವ ಋತು) **:** ....... ....... ....... ....... ....... ..

**4. ಸಾಮಾನ್ಯ ಎಲ್ಲಿ ಕಾಣಸಿಗುತ್ತದೆ ?**
....... ....... ....... ....... ....... ....... ....... ....... ....... .......

**5. ಒಂಟಿ/ ಜೋಡಿ/ ಗುಂಪಿನಲ್ಲಿರುತ್ತವೋ ?**
....... ....... ....... ....... ....... ....... ....... ....... ....... .......

**6. ಹೆಚ್ಚಾಗಿ ಏನು ತಿನ್ನುತ್ತದೆ?**
....... ....... ....... ....... ....... ....... ....... ....... ....... .......

**7. ಧ್ವನಿ ಹೇಗಿದೆ ?** (ಉದಾ:ಕಾಗೆ:-ಕಾವ್-ಕಾವ್) **....... ....... .......**

## ಪಕ್ಷಿ ಪ್ರೇಮಿ ಸಲೀಂ ಅಲಿ



ನವೆಂಬರ್ 12 , 1896ರಲ್ಲಿ ಜನಿಸಿದ ಇವರು ಪಕ್ಷಿ ತಜ್ಞರಾಗಿದ್ದರು. ಇವರು ಭಾರತದ ಪಕ್ಷಿ ಮನುಷ್ಯ ಎನಿಸಿದರು.ಇವರ **ಜನ್ಮ ದಿನವನ್ನು ರಾಷ್ಟೀಯ ಪಕ್ಷಿ ದಿನ ಎಂದು ಆಚರಿಸಲಾಗುತ್ತದೆ**.ಇವರು ಪಕ್ಷಿಗಳ ಬಗ್ಗೆ **ದಿ ಬುಕ್ಸ್ ಆಫ್ ಇಂಡಿಯನ್ ಬರ್ಡ್ಸ್** ಎಂಬ ಪುಸ್ತಕವನ್ನು ಬರೆದಿದ್ದಾರೆ. ಕರ್ನಾಟಕದ **ರಂಗನತಿಟ್ಟು, ಪಕ್ಷಿಧಾಮವಾಗಿ** ಸ್ಥಾಪನೆಯಾಗಲು ಸಲಿಂ ಅಲಿ ಅವರ ಪಾತ್ರ ಪ್ರಮುಖವಾಗಿತ್ತು.ಇವರಿಗೆ **1958 ರಲ್ಲಿ ಪದ್ಮ ಭೂಷಣ, 1976 ರಲ್ಲಿ ಪದ್ಮವಿಭೂಷಣ** ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.ಇವರ ತಮ್ಮ ಇಳಿ ವಯಸ್ಸಿನಲ್ಲೂ ಹಿಮಾಲಯದ ಗುಡ್ಡಗಾಡು ಪ್ರದೇಶದಲ್ಲಿ ಪಕ್ಷಿ ವೀಕ್ಷಣೆಯನ್ನು ಮಾಡುತ್ತಿದ್ದರು.



### ರಸಪ್ರಶ್ನೆಗಳು

1.ಅತಿ ಎತ್ತರದ ಪಕ್ಷಿ _____ 2.ಬಾವುಲಿ ಹಕ್ಕಿಯೇ?________

3.ಪಕ್ಷಿಗಳ ರಾಜ_____

4.ಯಾವ ಪಕ್ಷಿ ಹಿಮ್ಮುಖವಾಗಿ ಹಾರಬಲ್ಲದು?_____

5. ಅತಿ ಎತ್ತರದಲ್ಲಿ ಹಾರಬಲ್ಲ ಪಕ್ಷಿ. _______

**ನಮ್ಮ ರಾಜ್ಯ ಪಕ್ಷಿ ನೀಲಕಂಠ .ಈ ಪಕ್ಷಿಯ ಫೋಟೋ ತೆಗೆದು ಕಳುಹಿಸಿ. ಅದರ ಕೂಗನ್ನೂ ರೆಕಾರ್ಡ್ ಮಾಡಿ.**




**ಪ್ರಥಮ್ ಚಟುವಟಿಕೆ ಮತ್ತು ಸಂಪನ್ಮೂಲ ಕೇಂದ್ರ**
ಪ್ರಾಥಮಿಕ ಮಟ್ಟದಲ್ಲಿ ವಿಜ್ಞಾನ ಕಲಿಯಲು,ಕಲಿಸಲು ನಮ್ಮ ಕೇಂದ್ರವು ಉತ್ತಮ ಕೇಂದ್ರವಾಗಿದೆ.ಸದಸ್ಯತ್ವ ಉಚಿತ.ಸ್ವಯಂ ಸೇವಕರಾಗಲು ಅವಕಾಶವಿದೆ.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: +919110477512**